ಈ ವಿಪರ್ಯಾಸ ಸರಣಿಯ ಕಾರಣವನ್ನು ಗುರುತಿಸುವುದು ಕಷ್ಟವೇನಲ್ಲ. ಹತ್ತು ಪೈಸೆಯಷ್ಟು ಅಭಿವೃದ್ಧಿ ಉಂಟಾದರೆ ಅದರೊಡಗೂಡಿ ನೂರು ಪೈಸೆಯಷ್ಟು ಅವನತಿ ನಡೆದು, ಅದರ ಪ್ರವಾಹದಲ್ಲಿ ಈ ಅಲ್ಪಸಾಧನೆಯೂ ಕೊಚ್ಚಿಹೋಗುತ್ತಿದೆ.

ವಿದೇಶಗಳ ಸ್ವಾರ್ಥದೃಷ್ಟಿಯನ್ನು ಕುರಿತು ನಾವು ಪದೇ ಪದೇ ಮಾತನಾಡುತ್ತೇವೆ. ಆದರೆ ಭಾರತದೊಳಗಿನ ನಿರ್ಣಾಯಕ ಸ್ಥಾನಗಳಲ್ಲಿರುವ **ಆಡಳಿತಗಾರರೂ, ದೊಡ್ಡ** ಉದ್ಯಮಪತಿಗಳೂ ಅದೇ ದೃಷ್ಟಿಯನ್ನು ಮೈಗೂಡಿಸಿಕೊಂಡವರು ಎಂಬುದನ್ನೂ ನಾವು ಗಮನಿಸಬೇಕು.

ಹಲವಾರು ವಿಪರ್ಯಾಸಗಳನ್ನು ಈಚಿನ ಬೆಳವಣಿಗೆಗಳಲ್ಲಿ ನಾವು ಕಾಣುತ್ತೇವೆ. ನಮ್ಮ ದೇಶದ ಹಣದ ಮೌಲ್ಯವನ್ನು ರಕ್ಷಿಸಲು ಹಾಗೂ ವಿದೇಶೀ ವಿನಿಮಯ ಕಾವಲುಹಣದ ಪ್ರಮಾಣವನ್ನು ಹೆಚ್ಚಿಸಲು ನೆರವಾಗುತ್ತದೆ ಎಂಬ ವಾದವನ್ನೊಡ್ಡಿ, ಅಮಿತ ವಿದೇಶೀ ಹಣಹೂಡಿಕೆಗೆ ನಮ್ಮ ಸರ್ಕಾರ ಅವಕಾಶವನ್ನು ಹೆಚ್ಚಿಸಿತು. ಆದರೆ ಇದರ ಪರಿಣಾಮ ಅದು ಎಣಿಸಿದ್ದಕ್ಕೆ ವಿರುದ್ಧವೇ ಆಗಿದೆ.

ವಿದೇಶೀ ವಿನಿಮಯ ಕಾವಲುಹಣದ ಪ್ರಮಾಣ ಎಷ್ಟೇ ಇದ್ದರೂ, ಅದಕ್ಕೂ ಸ್ಥಳೀಯ ಹಣದ ಮೌಲ್ಯರಕ್ಷಣೆಗೂ ಸಂಬಂಧ ಏನೂ ಇರದು ಎನ್ನುವುದೇ ಹಲವಾರು ದೇಶಗಳ ಅನುಭವ. ಆದರೂ ಇಂಥ ಅರ್ಧಪಕ್ವಚಿಂತನೆಗಳ ಆಧಾರದ ಮೇಲೆ ನಮ್ಮ ಆರ್ಥಿಕನೀತಿಯನ್ನು ರೂಪಿಸಿದ್ದು ನಿಜಕ್ಕೂ ದುರದೃಷ್ಟಕರ.

ಬ್ಯಾಂಕುಗಳು ತಾವು ಕೊಡುವ ಬಡ್ಡಿದರಗಳನ್ನು ಕಡಮೆ ಮಾಡಿವೆ. ಒಂದು ಕಡೆ ಬ್ಯಾಂಕುಗಳಲ್ಲಿ ಹಣ ಹೇರಳವಾಗಿದೆ. ಇನ್ನೊಂದು ಕಡೆ ಯಾರೂ ಸಾಲ ತೆಗೆದುಕೊಳ್ಳಲು ಬರುತ್ತಲೇ ಇಲ್ಲ! ಹೊಸ ಕಾರ್ಖಾನೆಗಳೂ ಉದ್ಯಮಗಳೂ ಶುರುವಾದರೆ ತಾನೆ ಹಣ ಬೇಕಾಗುವುದು? ಹೀಗೆ ಬ್ಯಾಂಕುಗಳು ಅನಿವಾರ್ಯವಾಗಿ ಸರ್ಕಾರಿ ಸೆಕ್ಯುರಿಟಿಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಿವೆ. ಇದು ಹೇಗೆಂದರೆ, ರಾತ್ರಿ ಯಾರೂ ಮೋಂಬತ್ತಿಗಳನ್ನು ಕೇಳದ್ದರಿಂದ ಇದ್ದ ಮೋಂಬತ್ತಿಗಳನ್ನು ಹಗಲಿನಲ್ಲಿ ಸುಟ್ಟು ಬಿಸಾಡಿದಂತೆ.

ಬ್ಯಾಂಕುಗಳು ಇರುವುದು ಉಳಿತಾಯ ಮಾಡುವವರಿಂದ ಹಣ ಸಂಗ್ರಹಿಸಿ, ಅದನ್ನು ಹೂಡಿಕೆದಾರ ಉದ್ಯಮಿಗಳಿಗೆ ಒದಗಿಸುವುದಕ್ಕೆ. ಆದರೆ ಈಗ ಬ್ಯಾಂಕುಗಳು, ಬಡ ಗಿರಾಕಿಗಳಿಂದ ಹಣ ಸಂಗ್ರಹಿಸಿ, ಅದನ್ನು ಅದರ ಸಿಬ್ಬಂದಿಗೆ ಸಂಬಳ ಸಾರಿಗೆ ಕೊಡುವುದಕ್ಕಾಗಿ ಒದಗಿಸುತ್ತಿವೆ.

ಕಡಮೆ ಬಡ್ಡಿದರ ನೀಡಿಕೆಯಿಂದಾಗಿ ಉದ್ಯಮಗಳಲ್ಲಿ ಹೆಚ್ಚು ಹಣ ಹೂಡಿಕೆಯಾದಲ್ಲಿ, ಅದನ್ನು ಪ್ರಗತಿಪರವೆನ್ನಬಹುದು. ಆದರೆ ಇದೀಗ ಬಡ್ಡಿದರ ಕಡಮೆಯಾಗಿರುವುದು ಆರ್ಥಿಕ ಸ್ಥಗಿತತೆಯ ಕಾರಣದಿಂದ; ಹೊಸ ಉದ್ಯಮಗಳ ಸ್ಥಾಪನೆಯಾಗದ್ದರಿಂದ.

## ಆದ್ಯತೆಗಳ ಬಗ್ಗೆ ದುರ್ಲಕ್ಷ್ಯ

ಈಗಿನ ಆರ್ಥಿಕತೆಯ ಮೇಲೆ ಯಾರದಾದರೂ ನಿಯಂತ್ರಣ ಇದೆಯೆಂದೇ ಅನಿಸುವುದಿಲ್ಲ. ಉದಾಹರಣೆಗೆ: ಸರ್ಕಾರಿ ವಲಯದ ಉದ್ಯಮಗಳು ಸಾವಿರಾರು ಜನ ನೌಕರರಿಗೆ Voluntary Retirement (ಸ್ವಯಂ ನಿವೃತ್ತಿ) ಯೋಜನೆ ಅನ್ವಯಿಸಿ ಹಣ ಕೊಡುತ್ತಿದೆ. ಆದರೆ ಹಿಂದೆ ಲಂಚ ತೆಗೆದುಕೊಂಡು, ಅನಗತ್ಯ ನೌಕರಿಗಳನ್ನು ಸೃಷ್ಟಿಸಿ, ಇದೇ ಕೆಲಸಗಳನ್ನು ವಿತರಣೆ ಮಾಡಿದವರಲ್ಲಿ ಯಾರಿಗಾದರೂ ಇದುವರೆಗೆ ದಂಡನೆ ಆಗಿದೆಯೆ?

ಒಂದು ಕಡೆ, ಮೊಬೈಲ್ ಫೋನ್, ಅತ್ಯಧಿಕ ಟಿ.ವಿ. ಚ್ಯಾನೆಲುಗಳು, ಪರ್ಸನಲ್ ಕಂಪ್ಯೂಟರುಗಳು ವಿಜೃಂಭಿಸಿದರೆ ಇನ್ನೊಂದು ಕಡೆ, ಪ್ರಾಥಮಿಕ ಅಗತ್ಯಗಳ ಪೂರೈಕೆಯೂ ಒಳಹಂದರದ ಅಭಿವೃದ್ಧಿಯೂ ಅಲಕ್ಷಿತವಾದುವು; ದುಬಾರಿಯಾದ ಖಾಸಗಿ ಶಿಕ್ಷಣಸಂಸ್ಥೆಗಳು ಬೆಳೆದವು. ಆದರೆ ಗ್ರಾಮೀಣ ಪ್ರದೇಶಗಳ ಶೇ. ೭೦ರಷ್ಟು ಜನರಿಗೆ ಅವಲಂಬನೆಯಾಗಿರುವ ಸಾರ್ವಜನಿಕ ಶಿಕ್ಷಣದ ಗತಿ ಏನು? ಖಾಸಗಿ ನರ್ಸಿಂಗ್ ಹೋಮುಗಳು ಎಲ್ಲೆಡೆ ಹರಡಿವೆ. ಆದರೆ ಅಷ್ಟು ವೆಚ್ಚವನ್ನು ಕಲ್ಪಿಸಿಕೊಳ್ಳಲೇ ಆಗದ, ಸಾಮಾನ್ಯಜನರ ವೈದ್ಯಕೀಯ ಅಗತ್ಯದ ಪೂರೈಕೆಯ ಸುಧಾರಣೆ ಆಗಿಯೇ ಇಲ್ಲ.

ಕೃಷಿಯ ಬಗ್ಗೆ ಹೇಳುವುದಾದರೆ, ಇವತ್ತಿನವರೆಗಿನ ಅನುಭವವೆಂದರೆ ಕೃಷಿ ಕ್ಷೇತ್ರದ ಉತ್ಪಾದನೆ ಸಮರ್ಪಕವಾಗಿದ್ದಲ್ಲಿ ಮಾತ್ರ ಸಗಟು ರಾಷ್ಟ್ರೋತ್ಪನ್ನದ (ಜಿ.ಡಿ.ಪಿ.) ಹೆಚ್ಚಳ ಶಕ್ಯ. ಆದರೂ, ಜಾಗತೀಕರಣದ ಅನುಷ್ಠಾನ ನಡೆಯುತ್ತಿರುವ ವರ್ಷಗಳುದ್ದಕ್ಕೂ ಕೃಷಿ ಸೊರಗುತ್ತಲೇ ಬಂದಿದೆ. ಇದರಿಂದಾಗಿ ನಿರುದ್ಯೋಗ ಹೆಚ್ಚಿದೆ ಹಾಗೂ ನಗರಗಳಿಗೆ ವಲಸೆ ಕೂಡ ಅಧಿಕವಾಗಿದೆ.

ಮಾರುಕಟ್ಟೆಗೂ ವಾಣಿಜ್ಯಕ್ಕೂ ಪ್ರಾಧಾನ್ಯ ಕೊಡುತ್ತಿರುವುದು ಜಾಗತೀಕರಣ ಪ್ರಕ್ರಿಯೆಯ ಮುಖ್ಯ ಲಕ್ಷಣ. ಈ ಸಂದರ್ಭದಲ್ಲಿ ನಾವು ಇತಿಹಾಸವನ್ನು ನೆನಪಿಸಿಕೊಳ್ಳಬೇಕು. ಇವತ್ತು 'ಬಡ ದೇಶಗಳು', 'ಅಭಿವೃದ್ಧಿಶೀಲ ದೇಶಗಳು' ಎಂದೆಲ್ಲ ವರ್ಗೀಕರಿಸಲಾಗುತ್ತಿರುವ ದೇಶಗಳಿಗೆ ಈ ಪಟ್ಟ ದೊರೆತದ್ದೇ ವಿದೇಶಿ ವಾಣಿಜ್ಯದಿಂದಾಗಿ! ಭಾರತ ಈಗಿರುವಂತೆ ಹಿಂದೆ ಆರ್ಥಿಕವಾಗಿ ಕಳಪೆ ದೇಶವಾಗಿರಲಿಲ್ಲ. ಭಾರತದ ಜವಳಿ ಉತ್ಪನ್ನಗಳಿಗೆ ವಿದೇಶಗಳಲ್ಲಿ ಎಷ್ಟು ಬೇಡಿಕೆ ಇತ್ತೆಂದರೆ, ಇಂಗ್ಲೆಂಡ್ ಆ ಕಾಲದಲ್ಲಿ ಅವುಗಳಿಗೆ ಶೇ.೧೦೦ರಷ್ಟು ಆರ್ಥಿಕ ಕರ ವಿಧಿಸಿತ್ತು. ಭಾರತದಲ್ಲಿದ್ದ ಸಮೃದ್ಧಿಯನ್ನು ನೋಡಿ ರಾಬರ್ಟ್ ಕ್ಲೈವ್ ಆಶ್ಚರ್ಯಚಕಿತನಾಗಿ, "[India is] as extensive and as rich as the city of London" – "ಭಾರತದೇಶವು ಲಂಡನ್ ನಗರದಷ್ಟು ಸಮೃದ್ಧವಾಗಿದೆ" ಎಂದೆಲ್ಲ ಉದ್ಗಾರ ಮಾಡಿದ್ದ. ಆ ಸಮೃದ್ಧ ಸ್ಥಿತಿಯಿಂದ ಭಾರತ ಈಗಿನ ಸ್ಥಿತಿಗೆ ಬಂದದ್ದು ವಿದೇಶೀಯರ ಕುಟಿಲ ವಾಣಿಜ್ಯ ತಂತ್ರಗಳ ಕಾರಣದಿಂದಲೇ. ಅಂದು ಇಂಗ್ಲೆಂಡ್ ಮಾಡಿದ್ದನ್ನೇ ಇಂದು ವಿಶ್ವ ವಾಣಿಜ್ಯ ಸಂಘಟನೆ ಮೊದಲಾದ ವೇದಿಕೆಗಳ ಮೂಲಕ, ಅಮೆರಿಕ ಮತ್ತು ಪಶ್ಚಿಮ ಯೂರೋಪುಗಳು ಮಾಡುತ್ತಿವೆ.

ಸಾಮಾನ್ಯ ಜನತೆಯ ಬಗ್ಗೆ ಯಾವುದೇ ಹೊಣೆಗಾರಿಕೆಯಿಲ್ಲದೆ, ಬಲಿಷ್ಠ ದೇಶಗಳು ತಮ್ಮ ವ್ಯಾಪಾರೀ ಸಂಸ್ಥೆಗಳ ವಹಿವಾಟಿಗೆ ಅನುಕೂಲಕರವಾಗುವಂತೆ, ಜಗತ್ತಿನ ಬೇರೆಲ್ಲ ದೇಶಗಳ ಮೇಲೆ ಆರ್ಥಿಕ ದಬ್ಬಾಳಿಕೆ ನಡೆಸುತ್ತ ಬಂದಿರುವುದು ಹಳೆಯ ಕಥೆ. ಹಿಂದೆ ಸಾಮ್ರಾಜ್ಯಶಾಹಿ ಯುಗದಲ್ಲಿ ಸೇನಾಶಕ್ತಿಯ ಮೂಲಕ ನಡೆಯುತ್ತಿದ್ದ ಪ್ರಕ್ರಿಯೆಯೇ ಈಗ ಹಣಕಾಸಿನ ಮಾಧ್ಯಮದಿಂದ ನಡೆಯುತ್ತಿದೆ; ಇದರಲ್ಲಿ ವ್ಯತ್ಯಾಸವೇನಿಲ್ಲ.

## ಜಾಹೀರಾತಿನ ಆಕ್ರಮಣ

ವಿದೇಶೀ ಉತ್ಪನ್ನಗಳ ಆಕ್ರಮಣ ಈಗ ಊಹೆಯ ವಿಷಯವಾಗಿ ಉಳಿದಿಲ್ಲ. ಯಾವುದೇ ದೊಡ್ಡ ಅಥವಾ ಸಣ್ಣ ನಗರಗಳಲ್ಲಿಯೂ ಇದು ಕಣ್ಣಿಗೆ ಎದ್ದುಕಾಣುತ್ತದೆ. ಕೇವಲ ವಿದೇಶೀ ಉತ್ಪನ್ನಗಳನ್ನು ಮಾತ್ರವೇ ಮಾರಾಟ ಮಾಡುವ ಅಂಗಡಿಗಳೂ ಇಂದು ನೂರಾರಿವೆ.

"ನಿಮ್ಮ ಈಗಿನ ಸಂಸ್ಕೃತಿ ಕಳಪೆಯದು, ರಸಹೀನವಾದದ್ದು. ನಾವು ನೀಡುತ್ತಿರುವುದನ್ನು ಸ್ವೀಕರಿಸಿದರೆ ನಿಮ್ಮ ಬದುಕು ಸ್ವರ್ಗಸದೃಶವಾಗುತ್ತದೆ" ಎಂಬ ಸಂದೇಶವನ್ನು ಮಾಧ್ಯಮಗಳು ಹಗಲುರಾತ್ರಿ ಪ್ರಸಾರ ಮಾಡುತ್ತಿವೆ. ಈ ಆರ್ಥಿಕ 'ಮತಾಂತರ'ದ ಪ್ರಮುಖ ಸಾಧನ ಟಿ.ವಿ. ಮಾಧ್ಯಮ. *'Voluntary Simplicity'* ಗ್ರಂಥದಲ್ಲಿ ಡುಯೇನ್ ಎಲ್ಗಿನ್ (Duane Elgin) ಎಂಬ ಲೇಖಕ ಹೀಗೆ ಬರೆಯುತ್ತಾರೆ: "The use of television to promote exclusively materialistic values has become a massive mental health and public health problem for the United States and the world" (ಸಂಪೂರ್ಣವಾಗಿ ಭೌತಿಕತೆಯ ಮೌಲ್ಯಗಳನ್ನು ಪ್ರಸಾರ ಮಾಡಲೆಂದೇ ಟಿ.ವಿ. ಮಾಧ್ಯಮವನ್ನು ಉಪಯೋಗಿಸುತ್ತಿರುವುದು, ಅಮೆರಿಕ ಮತ್ತು ಇಡೀ ಪ್ರಪಂಚದಲ್ಲಿ ಭಾರೀ ಮಾನಸಿಕ ಮತ್ತು ಸಾರ್ವಜನಿಕ ಹಾಗೂ ಆರೋಗ್ಯ ಸಮಸ್ಯೆಗಳಾಗಿ ಪರಿಣಮಿಸಿದೆ).

ವಾಸ್ತವವಾಗಿ ಜಾಹೀರಾತಿನ ಆಕ್ರಮಣವನ್ನೂ ಒಂದು ನಮೂನೆಯ ಸಮರವೆಂದೇ ಕರೆಯಬಹುದು. ಇದು ಮೌಲ್ಯ ಸಮರ.

ಚಲನಚಿತ್ರಗಳು, ಪತ್ರಿಕೆಗಳು, ದೂರದರ್ಶನ ಕಾರ್ಯಕ್ರಮಗಳು, ಟಿ–ಷರ್ಟ್ ಮತ್ತಿತರ ಉಡುಪುಗಳು, ಕ್ರೀಡೆಗಳು, ಸಂಗೀತ – ಎಲ್ಲ ದೃಶ್ಯ–ಶ್ರವ್ಯ ಮಾಧ್ಯಮಗಳ ಮೂಲಕವೂ ಬಹುರಾಷ್ಟ್ರೀಯ ಕಂಪೆನಿಗಳ ಪಾಪ್ 'ಸಂಸ್ಕೃತಿ'ಯೂ ಕೊಳ್ಳುಬಾಕ ಸಂದೇಶವೂ ನಿರಂತರವಾಗಿ ಬಿತ್ತರವಾಗುತ್ತಿವೆ. ಈ ಪ್ರಸಾರಪ್ರವಾಹವನ್ನು ಯಾವ ಸರ್ಕಾರಗಳೂ ನಿಯಂತ್ರಿಸಲಾರವು. ವಾಸ್ತವತೆಗಳಿಂದ ದೂರವಾದ ಭ್ರಮಾಲೋಕವೊಂದನ್ನು ಸೃಷ್ಟಿಸಿ ಇದರಲ್ಲಿ ನೆಲೆಗೊಳಿಸಲಾಗಿದೆ. ಊಟ–ತಿಂಡಿ–ತಿನಿಸುಗಳಲ್ಲಿಯೂ ಕೃತಕ ರೀತಿಗಳನ್ನೇ ಹರಡಲಾಗಿದೆ.

"ಆರ್ಥಿಕ ಜಾಗತೀಕರಣವು ಇಡೀ ಸಮಾಜಗಳನ್ನೇ ಉಧ್ವಸ್ತಗೊಳಿಸುತ್ತಿದೆ.... ಮಾರುಕಟ್ಟೆಯೇ ಪ್ರಧಾನವಾದ ಉದಾರೀಕರಣ ಬಡದೇಶಗಳಲ್ಲಿ ಅತೀವ ಬವಣೆಗಳನ್ನು ಸೃಷ್ಟಿಸಿದೆ.... ಜಗತ್ತಿನಲ್ಲಿ ಬಡತನದ ರೇಖೆಗಿಂತ ಕೆಳಗಿರುವವರ ಪ್ರಮಾಣ ಕಳೆದ ಒಂದೇ ದಶಕದಲ್ಲಿ ೧೩೦ ಕೋಟಿಗೆ ಏರಿದೆ.... ಸಿಯಾಟಲ್‌ನಲ್ಲಿಯೂ (Seattle) ಪ್ರಾಗ್‌ನಲ್ಲಿಯೂ (Prague) ನಡೆದ ಪ್ರತಿಭಟನೆಗಳನ್ನು ಉದಾಸೀನ ಮಾಡುವುದು ದೊಡ್ಡ ತಪ್ಪಾಗುತ್ತದೆ."

ಈ ಟೀಕೆಗಳನ್ನು ಮಾಡಿದವರು ಯಾರೋ ಸಂಪ್ರದಾಯವಾದಿಗಳಲ್ಲ, ಪ್ರಗತಿವಿರೋಧಿಗಳಲ್ಲ. ಉದ್ಯಮ ವಲಯದ ಒಂದು ಪ್ರಮುಖ ಮುಖವಾಣಿಯೆಂದೆನಿಸಿರುವ 'ಬಿಸಿನೆಸ್‌ವೀಕ್' ಪತ್ರಿಕೆಯ ಒಂದು ಸಂಚಿಕೆಯಲ್ಲಿ ನೀಡಲಾಗಿರುವ ವಿಶ್ಲೇಷಣೆ ಇದು.

ಜಾಗತೀಕರಣದ ಪ್ರಬಲ ಸಮರ್ಥಕವಾದ ವಿಶ್ವಬ್ಯಾಂಕ್ ಕೂಡ ತನ್ನ ಇತ್ತೀಚಿನ ಒಂದು ವರದಿಯಲ್ಲಿ "ಆರ್ಥಿಕ ಜಾಗತೀಕರಣವು ಸ್ಥಳೀಯ ಸನ್ನಿವೇಶಗಳಲ್ಲಿ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ" ಎಂದಿದೆ.

## ಅಡ್ಡಪರಿಣಾಮಗಳು

ವಿಚಾರಶೂನ್ಯ ಜಾಗತೀಕರಣದಿಂದ ಯಾವ ಅಡ್ಡಪರಿಣಾಮಗಳು ಆಗುತ್ತವೆಂದು ಸ್ವದೇಶೀ ಚಿಂತಕರು ಆರಂಭದಿಂದ ಹೇಳುತ್ತ ಬಂದಿದ್ದಾರೋ, ಅವೆಲ್ಲ ಈಗ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಭಾರತದಂಥ ಬಡ ದೇಶಗಳ ಮಾತು ಹಾಗಿರಲಿ, ಶ್ರೀಮಂತ ದೇಶಗಳೇ ಈಗ ಚಿಂತಾಗ್ರಸ್ತವಾಗಿವೆ. ವಿಶ್ವಬ್ಯಾಂಕ್, ಐ.ಎಂ.ಎಫ್. (ಅಂತರರಾಷ್ಟ್ರ ಹಣ ನಿಧಿ), ಡಬ್ಲ್ಯು.ಟಿ.ಓ (ವಿಶ್ವ ವಾಣಿಜ್ಯ ಸಂಘಟನೆ) – ಈ ಮಾಧ್ಯಮಗಳ ಮೂಲಕ ಔದ್ಯಮೀಕೃತ ದೇಶಗಳು ಹರಿಯಬಿಟ್ಟ ಸ್ವಾರ್ಥದೃಷ್ಟಿಯ ಧೋರಣೆಗಳು ಅವುಗಳಿಗೇ ಈಗ ತಿರುಗುಬಾಣವಾಗತೊಡಗಿವೆ.

ಬಹುರಾಷ್ಟ್ರೀಯ ಕಂಪೆನಿಗಳೂ ಜಾಗತಿಕ ಹಣಕಾಸು ಸಂಸ್ಥೆಗಳೂ ಇಡೀ ವಿಶ್ವದ ಆರ್ಥಿಕತೆಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಅನೇಕ ವರ್ಷಗಳಿಂದ ಎಲ್ಲಿಲ್ಲದ ಪ್ರಯತ್ನ ನಡೆಸಿವೆ. ಈ ಪ್ರಕ್ರಿಯೆಯ ಪ್ರಮುಖ ಅಂಶವೆಂದರೆ ಭೌಗೋಲಿಕ ಗಡಿಗಳಿಗೆ ಅತೀತವಾಗಿ, ಸರಕುಗಳು, ಸೇವೆಗಳು, ಬಂಡವಾಳ ಇವೆಲ್ಲದರ ಅಂತರರಾಷ್ಟ್ರೀಯ ಸಾಗಾಟ ಹಿಂದೆ ಇದ್ದುದಕ್ಕಿಂತ ಬಹುಪಾಲು ತೀವ್ರಗೊಂಡಿದೆ. ಉದಾರೀಕರಣದಿಂದ ಉತ್ಪಾದನಾವಲಯವೂ ನೌಕರಿಗಳೂ ಹೆಚ್ಚಬೇಕಾಗಿತ್ತು. ಆದರೆ ಬೆಳೆದಿರುವುದು 'ಸರ್ವಿಸಸ್ ಸೆಕ್ಟಾರ್' (Services Sector) ಎಂದರೆ 'ವ್ಯವಸ್ಥಾಪನಾವಲಯ' ಮಾತ್ರ.

ಸೃಷ್ಟಿಯ ಆರಂಭದಿಂದಲೂ ನೆಲ–ನೀರು–ಗಾಳಿಗಳ ಮೇಲೆ ಯಾರಿಗೂ ಸ್ವಾಮಿತ್ವ ಇರಲಿಲ್ಲ. ಈಗ 'ಯೋಜನೆ'ಗಳ ಮೂಲಕ ನೀರು–ಗಾಳಿಗಳನ್ನೂ ಖಾಸಗೀಕರಿಸಿ 'ಮಾರಾಟ'ದ ಕಕ್ಷೆಯಲ್ಲಿ ತರಲಾಗಿದೆ. ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಬಾಳುವೆಗಾಗಿ ನೇರವಾಗಿ ಅವಲಂಬಿಸಿರುವ ೭೦ ಕೋಟಿ ಗ್ರಾಮೀಣರಿರುವ ಈ ದೇಶದಲ್ಲಿ ಆ ಸಂಪನ್ಮೂಲಗಳನ್ನೂ ಷೇರು–ಬಾಂಡುಗಳಾಗಿ ಪರಿವರ್ತಿಸಲಾಗುತ್ತಿದೆ. ಹಿಂದೀ ಕವಿ ಜಾವೇದ್ ಅಖ್ತರ್ ಬರೆದಿರುವ ಒಂದು ಪದ್ಯ ಇದೆ. 'ತರಕಶ್' – 'ಬತ್ತಳಿಕೆ' ಎಂಬ ಪದ್ಯ ಸಂಕಲನದ ಆ ಪದ್ಯದ ಒಂದೆರಡು ಸಾಲುಗಳು ಹೀಗಿವೆ:

**ಊಂಚೀ ಇಮಾರತೋಂ ಸೇ ಘರ್ ಮೇರಾ ಗಿರ್‌ಗಯಾ ।**
**ಕುಛ್ ಲೋಗ್ ಮೇರೇ ಹಿಸ್ಸೇ ಕಾ, ಸೂರಜ್ ಭೀ ಖಾಗಯಾ ॥**

"ಗಗನಚುಂಬಿಗಳ ದೆಸೆಯಿಂದ ನನ್ನ ಮನೆ ಬಿದ್ದು ಹೋಯಿತು. ಕೆಲವು ಜನ ನನ್ನ ಭಾಗದ (ಆಕಾಶದ) ಸೂರ್ಯನನ್ನೂ ತಿಂದು ಬಿಟ್ಟರು!"

ಇವತ್ತಿನ ಪ್ರಪಂಚ ಎಷ್ಟು ಜಟಿಲವಾಗಿಬಿಟ್ಟಿದೆಯೆಂದರೆ, ನಾವು ನಾಶವಾಗುವುದಕ್ಕೆ ಬೇರೇನೂ ಮಾಡಬೇಕಾಗಿಲ್ಲ, ಸುಮ್ಮನೆ ಕುಳಿತಿದ್ದರೆ ಸಾಕು! ವಿದೇಶಿ ಮತ್ತು ದೇಶೀಯ ಧಣಿಗಳು ನಮ್ಮಿಂದ ನಿರೀಕ್ಷಿಸುವುದು ಇಂಥ ನಿಷ್ಕ್ರಿಯತೆಯನ್ನೇ. ಆದ್ದರಿಂದ ನಾವು ಜಾಗರೂಕರಾಗೋಣ. ★

# ಬಡತನ ನಿರ್ಮೂಲನೆ : ಗಾಂಧೀ ಪರಿಹಾರ

ಸುರೇಂದ್ರ ಕೌಲಗಿ

ಬಡತನವೆಂಬುದು ಶಾಪವಲ್ಲ. ಬಡಜನರ ಉದ್ಧಾರವು ಸಾರ್ವತ್ರಿಕವಾಗಿ, ಸರ್ವರ ಉದ್ಧಾರದಿಂದ ಸಾಧ್ಯವೇ ಹೊರತು, ಕೆಲವರ ಏಳಿಗೆಯಿಂದ ಮಾತ್ರ ಅಲ್ಲ. ಎಲ್ಲರ ಕೈಗೆ ಕೆಲಸ ದೊರೆತಾಗ ಮಾತ್ರ ಅದು ನಿಜವಾದ 'ಬಡತನ ನಿರ್ಮೂಲನ' ವಾಗುತ್ತದೆ. ಈ ಅಂಶಗಳನ್ನು ಗಾಂಧೀಜಿಯವರ ಚಿಂತನೆಯ ಹಿನ್ನೆಲೆಯೊಂದಿಗೆ ಹೃದಯಸ್ಪರ್ಶಿಯಾಗಿ ವಿವರಿಸಿರುವ ಮಾನ್ಯ ಲೇಖಕರು, ಕಳೆದ ೫೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಮೇಲುಕೋಟೆಯಲ್ಲಿ, 'ಜನಪದ ಸೇವಾ ಟ್ರಸ್ಟ್' ಅನ್ನು ನಡೆಸುತ್ತಿದ್ದಾರೆ. ಅಂಗವಿಕಲರು ಮತ್ತು ಸಾಮಾಜಿಕವಾಗಿ ಹಿಂದುಳಿದವರ ಸೇವೆಯನ್ನು ಈ ಸಂಸ್ಥೆ ಮಾಡುತ್ತಾ ಬಂದಿದೆ.

"ಪ್ರಕೃತಿಯಲ್ಲಿ ಪ್ರತಿಯೊಬ್ಬರ ಅಗತ್ಯ ಪೂರೈಸುವಷ್ಟಿದೆ. ಆದರೆ ಪ್ರತಿಯೊಬ್ಬರ ದುರಾಸೆಯನ್ನು ಪೂರೈಸುವಷ್ಟಿಲ್ಲ."

*– ಮಹಾತ್ಮ ಗಾಂಧೀ*

"ನಾವು ಐಶ್ವರ್ಯದ ಬಗ್ಗೆ ಚಿಂತಿಸಬೇಕಿಲ್ಲ. ಬದಲಿಗೆ ಸಂತೃಪ್ತಿಯ ಬಗ್ಗೆ ಚಿಂತಿಸಬೇಕು."

–ಒಲಿವ್ ಹೆಮಿಲ್ಟನ್ (ಆಸ್ಟ್ರೇಲಿಯಾದ ಅರ್ಥಶಾಸ್ತ್ರಜ್ಞ)

ಒಬ್ಬ ಆಧ್ಯಾತ್ಮಿಕ ಸಾಧಕರನ್ನು, ಬಡತನ ನಿರ್ಮೂಲನದ ಉಪಾಯವೇನೆಂದು ಪ್ರಶ್ನಿಸಿದರೆ ಅವರು ಕೊಡುವ ಉತ್ತರವನ್ನು ಈ ರೀತಿ ನಿರೀಕ್ಷಿಸಬಹುದು: "ಬಡತನದಲ್ಲಿಯೇ ಇದ್ದು ದೈವೀಕೃಪೆ ಪಡೆಯಲು ಸತತ ಸಾಧನೆ ಮಾಡುತ್ತಿದ್ದರೂ, ಅದು ಇದುವರೆಗೂ ಸಾಧ್ಯವಾಗಿಲ್ಲದೇ ಇರುವುದಕ್ಕೆ, ನನ್ನ ಬಡತನದಲ್ಲಿ ಅಪೂರ್ಣತೆ ಇರುವುದೇ ಕಾರಣವೆಂದು ನನಗನಿಸುತ್ತದೆ. ಆದ್ದರಿಂದ ಇನ್ನೂ ಹೆಚ್ಚು ಬಡವನಾಗಿರಲು ನಾನು ಪ್ರಯತ್ನಿಸಬೇಕಿದೆ." ಅಂದರೆ ಬಡತನದಲ್ಲಿರುವ, ಅಗೋಚರವಾದ ಅನುಭೂತಿಯಿಂದ ಮಾತ್ರ ತಿಳಿಯಬಹುದಾದ ಆತ್ಮಶ್ರೀಯನ್ನು ಪಡೆಯಬೇಕಾದರೆ, ಬಡತನ ನಿರ್ಮೂಲನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೆಚ್ಚು ಹೆಚ್ಚು ಬಡತನದ ಜೀವನ ರೀತಿ, ಹೆಚ್ಚು ಹೆಚ್ಚು ಆತ್ಮಶ್ರೀಯ ಸಂಪಾದನೆಗೆ ಸೋಪಾನವಾಗುತ್ತದೆ.

ಬಡತನ ನಿರ್ಮೂಲನದ ಪ್ರಶ್ನೆಯಾಗಲಿ, ವಿಚಾರವಾಗಲಿ, ಬರುವುದು ಭೋಗಿಗಳ ಮುಂದಲ್ಲದೆ ತ್ಯಾಗಿಗಳ ಮುಂದಲ್ಲ; ನಾಸ್ತಿಕನ ಮುಂದಲ್ಲದೆ ಭಕ್ತನ ಮುಂದಲ್ಲ. ಏಕೆಂದರೆ ದಾಸರು ಹಾಡಿರುವಂತೆ, **"ಭಕ್ತನಿಗೆ ಬೇಕಾಗಿರುವುದು ಇನ್ನೇನಿನ್ನೇನು, ಎನ್ನೊಳು ಗುರು ತನ್ನ ಮರ್ಮವ ತೋರಿದ, ಇನ್ನೇನಿನ್ನೇನು."** ತ್ಯಾಗಿಗೆ ಮತ್ತು ಭಕ್ತನಿಗೆ ಬಡತನವೇ ಭೂಷಣವಾಗಿರುವಾಗ ಅವರನ್ನು ಬಡತನ ನಿರ್ಮೂಲನದ ಬಗೆ ಹೇಗೆ ಎಂದು ಕೇಳಿದರೆ, ಪಾಪ ಅವರೇನು ಉತ್ತರ ಕೊಟ್ಟಾರು? ಶ್ರೀಮಂತಿಕೆ ಬೆಳೆಸಿಕೊಳ್ಳಿರಿ, ಭೌತಿಕ ಸಾಧನಸಂಪತ್ತುಗಳನ್ನು ಹೆಚ್ಚಿಸಿಕೊಳ್ಳಿರಿ, ಹಣದ ದಾಸರಾಗಿರಿ, ಆಸೆಬುರುಕರಾಗಿರಿ ಎಂದು ಎಂದಾದರೂ ಅವರು ಹೇಳಿಯಾರೆ? ಯಾವ ಸಂತನೂ ಬಡತನ ನಿರ್ಮೂಲನಕ್ಕೆ ಪರಿಹಾರವೆಂದು ಈ ಇಪ್ಪತ್ತೊಂದನೇ ಶತಮಾನದಲ್ಲಿ ಸೂಚಿತವಾಗುತ್ತಿರುವ ಯಾವ ಮಾರ್ಗವನ್ನೂ, ಯಾವ ವಿಚಾರವನ್ನೂ ಸೂಚಿಸಲಾರ. 'ಬಡತನ ನಿರ್ಮೂಲನ' ಎಂಬ ವಿಷಯ ಗಾಂಧಿಯವರಿಗೆ ಅಸಂಗತವಾಗಿ ಕಂಡಿದ್ದರೆ ಆಶ್ಚರ್ಯವೇನಿಲ್ಲ. ತದ್ವಿರುದ್ಧವಾಗಿ ಎಲ್ಲ ದೇಶಗಳ ಪ್ರಧಾನಿಗಳಿಗೆ ಅದು ಬಹಳವಾಗಿ ಪ್ರಸ್ತುತವೆನಿಸುತ್ತದೆ! ಆದ್ದರಿಂದ 'ಬಡತನ ನಿರ್ಮೂಲನ'ದ ವಿಷಯದ ಮೇಲೆಯೇ ಅವರ ರಾಜಕೀಯ ಜೀವನದ ಏಳಿಳಿತಗಳು ಅವಲಂಬಿಸಿವೆ. ಅದಕ್ಕಾಗಿಯೇ ಬಡತನ ಅವರಿಗೆ ದುಃಸ್ವಪ್ನವಾಗಿ ಕಾಣುತ್ತದೆ ಮತ್ತು ಕಾಡುತ್ತದೆ. ದುಃಸ್ವಪ್ನದ ಕಾರಣದಿಂದಾಗಿ ದಿಢೀರೆಂದು ಎಚ್ಚರಗೊಳ್ಳುವ ಮನುಷ್ಯನಿಗೆ ದೀರ್ಘಕಾಲ ಮಂಕು ಕವಿದಿರುತ್ತದೆ; ಮುಂದಿನ ದಾರಿ ಸುಗಮವಾಗಿ ಕಾಣುವುದಿಲ್ಲ. ಪರಿಣಾಮವಾಗಿ ಅವನು ಮತ್ತೊಂದು ಪ್ರಕಾರದ ತಪ್ಪು ಮಾರ್ಗ ಅನುಸರಿಸುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಇಂಥ ಭ್ರಮಿತ ಮನಃಸ್ಥಿತಿ ಜಗತ್ತಿನ ಇಂದಿನ ಎಲ್ಲ ರಾಷ್ಟ್ರಗಳ ನೀತಿನಿರೂಪಕರದ್ದಾಗಿದೆ. ಆದ್ದರಿಂದ ಅವರಿಗೆ ಬಡತನವೆಂಬುದು ಹೋಲಿಕೆಯ ವಿಷಯವಾಗಿದೆ.

ಅಭಿವೃದ್ಧಿ ಹೊಂದುತ್ತಿರುವ ಭಾರತ ತನ್ನನ್ನು, ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಅಮೇರಿಕದ ಜೊತೆಗೆ ಹಾಗೂ ಭರದಿಂದ ಅಭಿವೃದ್ಧಿ ಹೊಂದುತ್ತಿರುವ ಚೀನಾದ ಜೊತೆಗೆ ಹೋಲಿಸಿಕೊಂಡು, ತನ್ನಲ್ಲಿ ಮನೆಮಾಡಿರುವ ಬಡತನದ ಬಗ್ಗೆ ದುಃಖಿಸುತ್ತದೆ; ಕೀಳರಿಮೆಯಲ್ಲಿ ಕೊರಗುತ್ತದೆ. ಎಲ್ಲಿಯವರೆಗೆ ಜಗತ್ತಿನ ಇತರ ಶ್ರೀಮಂತ ದೇಶಗಳ ಜೊತೆ ತನ್ನನ್ನು ಹೋಲಿಸಿಕೊಂಡಿರುತ್ತದೋ, ಅಲ್ಲಿಯವರೆಗೂ ಭಾರತ, ತನ್ನ ಬಡತನದ ಚೌಕಟ್ಟಿನಿಂದ ಹೊರಬರಲಾರದು. ಏಕೆಂದರೆ ಭಾರತ ತನ್ನ ಬಡತನವನ್ನು ನೀಗಿಸಿಕೊಳ್ಳಬೇಕಾದರೆ ಅದು ತನ್ನದೇ ಆದ ಸಂಸ್ಕೃತಿ, ಪರಿಸ್ಥಿತಿ, ಮನಃಸ್ಥಿತಿಗಳ ಆಧಾರದ ಮೇಲೆ ರೂಪಿತವಾದ ಬಡತನ ನಿರ್ಮೂಲನಾ ಕಾರ್ಯಕ್ರಮವನ್ನು ಜಾರಿಗೊಳಿಸಬೇಕು. ತನ್ನ ಬಡತನವನ್ನು ಸ್ವದೇಶೀ ರೀತಿಯಲ್ಲಿಯೇ ಹೋಗಲಾಡಿಸಿಕೊಳ್ಳಬೇಕು. ಇದಕ್ಕೆ ಬದಲಾಗಿ ವಿದೇಶೀ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳತೊಡಗಿದರೆ ದೇಶದ ಬಡತನ ನಿರ್ಮೂಲವಾಗುವುದಿರಲಿ, ಅದರ ಪ್ರಮಾಣ ಹೆಚ್ಚಾಗಿ ಅದು ದೇಶದ ಕೊರಳಿಗೆ ಉರುಳಾಗುವುದು. ವಿದೇಶೀ ಅನುಕರಣೆಯಿಂದ ರೂಪಿತವಾಗುವ ಭಾರತ 'ಹಿಂದೂಸ್ಥಾನ' ವಾಗಿರದೆ 'ಅಮೇರಿಕಾಸ್ಥಾನ', 'ಇಂಗ್ಲಿಷ್‌ಸ್ಥಾನ'ವಾಗುವುದು. ಅದಾಗಬಾರದು ಎನ್ನುವುದು "ಹುಲಿಯ ಸ್ವಭಾವ ಇರಲಿ, ಹುಲಿ ಬೇಡ" ಎಂದು ಹೇಳಿದಂತಾಗುತ್ತದೆ.

ಒಂದು ಕಾಲಕ್ಕೆ ಅಮೇರಿಕಾ ಬಡ ದೇಶವೇ ಆಗಿತ್ತು. ಕೈಗಾರಿಕಾ ಕ್ರಾಂತಿ ಸಾಧಿಸಿದ್ದ ಇಂಗ್ಲೆಂಡಿನೊಂದಿಗೆ ಅದರ ಸಂಪರ್ಕವುಂಟಾದ ಮೇಲೆ ನಿಧಾನವಾಗಿ ಅದು ಪ್ರಗತಿಯನ್ನು ಸಾಧಿಸುತ್ತಾ ಬಂತು. ಸುಮಾರು ಮೂರು ಶತಮಾನಗಳ ರಾಜಕೀಯ, ಸಾಮಾಜಿಕ,